## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.

**ಸಿಸಿ ನಂ.512/2017**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಮಳಖೇಡ ಪೊಲೀಸ್ ಠಾಣೆ

-ಃಃ ವಿರುದ್ಧ ಃಃ-

ಆರೋಪಿ ನಂ.1. ಲೀಲಾಬಾಯಿ ಗಂಡ ದೇವ್ಯಾ ಚವ್ಹಾಣ,
ವಃ 40 ವರ್ಷ, ಉಃ ಮನೆಗೆಲಸ,

2. ಪಿಂಕಿ ಗಂಡ ರವಿ ರಾಠೊಡ
ವಃ 26 ವರ್ಷ, ಉಃ ಮನೆಗೆಲಸ,
ಇಬ್ಬರೂ ಸಾಃ ಸ್ಟೇಷನ ತಾಂಡಾ, ನೃಪತುಂಗ ನಗರ,
ತಾಃ ಸೇಡಂ

----

### ದೋಷಾರೋಪಣೆ

ನಾನು ಶ್ರೀ ಸುನೀಲ್.ಎಸ್.ತಳವಾರ, ಬಿ.ಎ.ಎಲ್‌ಎಲ್‌ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 20-03-2017 ರಂದು ಮಧ್ಯಾಹ್ನ 12.00 ಗಂಟೆ ಸುಮಾರಿಗೆ ಮಳಖೇಡ ಠಾಣಾ ಹದ್ದಿಯಲ್ಲಿಯ ಸ್ಟೇಷನ ತಾಂಡಾ-ನೃಪತುಂಗ ನಗರದ ಆತ್ಮ ಲಿಂಗ ಗುಡಿಯ ಹತ್ತಿರ ಸಾರ್ವಜನಿಕ ರಸ್ತೆಯ ಮೇಲೆ ದೂರು ದಾರರು ನಿಮ್ಮ ಮನೆಗೆ ಬಂದು ತನ್ನ ಮಗ ರಾಹೂಲ ಇತನೊಂದಿಗೆ ಯಾಕೆ ಜಗಳ ಮಾಡಿದಿ ಅಂತಾ ಕೇಳಿ ಮನೆಯ ಕಡೆಗೆ ಹೋಗುತ್ತಿರುವಾಗ ಆರೋಪಿತರಾದ ನೀವು ಅವರನ್ನು ಎಲ್ಲಿಯೂ ಹೋಗದಂತೆ ತಡೆದು ನಿಲ್ಲಿಸಿದ್ದು ದೂರು ದಾರರಿಗೆ ಭೋಸಡಿ ನೀ ನಮ್ಮ ಮನೆ ತನಕ ಬಂದು ಜಗಳ ಮಾಡತಿ ಹಾಗೂ ಈ ಗಂಡ ಸತ್ತ ರಂಡಿದು ಬಹಳ ಆಗಿದೆ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಸ್ಥಳದಲ್ಲಿ ಅವಮಾನ ಪಡಿಸಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.341, 504 ಸಹವಾಚಕ ಕಲಂ 34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಸಮಾನೋದ್ದೇಶದಿಂದ ದೂರು ದಾರರೊಂದಿಗೆ ಜಗಳ ಮಾಡಿ ಅವಳಿಗೆ ಕೈಯಿಂದ ಹೊಟ್ಟೆಗೆ ಬಲಗೈ ಗೆ ಹೊಡೆದಿದ್ದು ಕಲ್ಲಿನಿಂದ ಎಡಗಾಲಿನ ಕಿರುಬೆರಳಿಗೆ ಹೊಡೆದಿದ್ದು ಅದೇ ರೀತಿ ಎಡ ಭುಜಕ್ಕೆ ಎಡ ಕುತ್ತಿಗೆಯ ಹತ್ತಿರ ಕೈ ಮುಷ್ಟಿ ಮಾಡಿ ಜೋರಾಗಿ ಹೊಡೆದು, ಎಡ ಕಿವಿಯ ಜುಮಕಿ ಹೂವು ಕಿತ್ತು ಜಗಳ ಮಾಡಿದ್ದು ಅಲ್ಲದೆ ಸಾದಾ ಮತ್ತು ಭಾರಿ ಗಾಯ ಪಡಿಸಿದ್ದು ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.324, 323, 325 ಸಹವಾಚಕ ಕಲಂ 34 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಸಹಿ

ದಿನಾಂಕಃ 23-01-2024 ಪ್ರ.ದ.ನ್ಯಾದಂ. ಸೇಡಂ.

<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.</u>

<u>ಸಿಸಿ ನಂ.**512/2017**</u>

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಮಳಕೇಡ ಪೊಲೀಸ್ ಠಾಣೆ

-ಃಃ ವಿರುದ್ದ ಃಃ-

ಆರೋಪಿ ನಂ.1. ಲೀಲಾಬಾಯಿ ಗಂಡ ದೇವ್ಯಾ ಚವ್ವಾಣ,
ವಃ 40 ವರ್ಷ, ಉಃ ಮನೆಗೆಲಸ,
ಸಾಃ ಸ್ಟೇಷನ ತಾಂಡಾ , ನೃಪತುಂಗ ನಗರ,
ತಾಃ ಸೇಡಂ ಹಾಗೂ ಇತರರು

<u>ಆರೋಪಿತರ ಹೇಳಿಕೆ</u>

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ ಆ-1

ಆ-2

ಪ್ರಃ-2) ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆ ನಡೆಯಬೇಕಾ?

ಉಃ ಆ-1

ಆ-2

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ಸಹಿ

ದಿನಾಂಕ 23-01-2024 ಪ್ರ.ದ.ನ್ಯಾದಂ. ಸೇಡಂ.